# ಹಲೋ, ಯಾರಿದ್ದೀರಿ?

ಯು.ಎಸ್.ಎ. ಅಧೀನದಲ್ಲಿರುವ ಪೋರ್ಟೋರೀಕೋದಲ್ಲಿನ ಅರೆಸಿಬೋ ರೇಡಿಯೋ ಟೆಲಿಸ್ಕೋಪ್‌ನ ಪುನರ್ವಿನ್ಯಾಸ ಮಾಡಿದ ನೆನಪಿಗಾಗಿ 1974ರ ನವೆಂಬರ್ 16ರಂದು ಒಂದು ಸಮಾರಂಭ ನಡೆಯಿತು. ಈ ಕಾರ್ಯಕ್ರಮದಲ್ಲಿ ಎಫ್.ಎಂ.ತಂತ್ರಜ್ಞಾನವನ್ನು ಬಳಸಿ ಒಂದು ಸಂದೇಶವನ್ನು ಪ್ರಸಾರ ಮಾಡಲಾಯಿತು. ಇದನ್ನು 25 ಸಾವಿರ ಜ್ಯೋತಿರ್ವರ್ಷ ದೂರದಲ್ಲಿರುವ, ಎಂ 13 ಎಂಬ, ಸುಮಾರು 3 ಲಕ್ಷ ನಕ್ಷತ್ರಗಳ ಒಂದು ಬೃಹತ್ ಪುಂಜವನ್ನು ಉದ್ದೇಶಿಸಿ ಕಳಿಸಲಾಗಿತ್ತು. ಇದನ್ನು ಅರೆಸಿಬೊ ಸಂದೇಶ ಎನ್ನಲಾಗುತ್ತದೆ.

ಅರೆಸಿಬೋ ಸಂದೆಶ ಎಂದೇ ಕರೆಯಲಾಗುವ ಈ ವಿಶ್ವಸಂದೇಶವನ್ನು ಡಾ.ಫ್ರಾಂಕ್ ಡ್ರೇಕ್ ಮತ್ತು ಕಾರ್ಲ್ ಸೇಗನ್ ಇತರ ವಿಜ್ಞಾನಿಗಳ ನೆರವಿನಿಂದ ರೂಪಿಸಿದರು. ಇದು, 1 ರಿಂದ 10ರ ವರೆಗೆ ಅಂಕೆಗಳು, ಮನುಷ್ಯನ ಗ್ರಾಫಿಕ್ ಚಿತ್ರ, ಯಾವ ಗ್ರಹದಿಂದ ಈ ಸಂದೇಶ ಬಂದಿದೆ ಎನ್ನುವುದನ್ನು ಗುರುತಿಸಿದ ಸೌರ್ಯವ್ಯೂಹದ ಗ್ರಾಫಿಕ್ ಚಿತ್ರಗಳು ಇತ್ಯಾದಿ ಏಳು ಅಂಶಗಳನ್ನು ಒಳಗೊಂಡಿದೆ. ಈ ನಮ್ಮ ಸಂದೇಶವು ಅಲ್ಲಿಗೆ ತಲುಪಿ 'ಹಲ್ಲೋ ಯಾರಿದ್ದೀರಿ?' ಎಂದು ಬಾಗಿಲು ಬಡಿಯಲು ಸುಮಾರು 25,000 ವರ್ಷ ಬೇಕು, ಅಕಸ್ಮಾತ್ 'ಹಲೋ, ನಾವಿದ್ದೀವಿ?' ಎಂದು ಅಲ್ಲಿಂದ್ಯಾರಾದರೂ ಉತ್ತರಿಸಿದರೆ ಅದು ಹಿಂದಿರುಗಿ ಭೂಮಿಯನ್ನು ತಲುಪಲು ಮತ್ತೆ 25,000 ವರ್ಷ ಬೇಕು. ಇನ್ನೂ ಸ್ವಾರಸ್ಯಕರ ಸಂಗತಿಯೆಂದರೆ ನಮ್ಮ ಈ ರೇಡಿಯೋ ಸಂದೇಶ ಅಲ್ಲಿಗೆ ತಲುಪುವಾಗ ಎಂ 13 ನಕ್ಷತ್ರ ಪುಂಜ ಈಗ ನಮಗೆ ಕಂಡಿರುವಲ್ಲಿ ಇರುವುದೇ ಇಲ್ಲ. ಆದರೂ, ಈ ಚಿಕ್ಕ ಸಂದೇಶ ಸೌರವ್ಯೂಹದಲ್ಲಿರುವ ಬುದ್ಧಿವಂತ ಜೀವಿಗಳಾದ ಮನುಷ್ಯರ ಸಾಧನೆಯನ್ನು ಸಾರುವ ಒಂದು ಪ್ರಯತ್ನವಾಗಿದೆ.



**ಅರೆಸಿಬೋ ಅಬ್ಸರ್ವೇಟರಿ**

20ನೇ ಶತಮಾನದ ಮಧ್ಯಭಾಗದಿಂದೀಚೆ, ಅನ್ಯಗ್ರಹ ಜೀವಿಗಳಿಗಾಗಿ ಹುಡುಕಾಟದ ಕ್ರಿಯೆ ಹೆಚ್ಚು ಭರದಿಂದ ನಡೆದಿದೆ. ವಿಶ್ವದ ಯಾವುದಾದರೂ ಮೂಲೆಯಿಂದ ಯಾವುದಾದರೂ ಬಗೆಯ ಸಂಕೇತಗಳೂ ಸಿಗಬಹುದೇ ಎಂದು ರೇಡಿಯೋ ಟೆಲಿಸ್ಕೋಪುಗಳು ಕಿವಿ ನಿಮಿರಿಸಿಕೊಂಡು ಆಲಿಸುತ್ತಿವೆ. ಜೀವದ ಲಕ್ಷಣಗಳು ಕಾಣಿಸುವವೇ ಎಂದು ಹಲವಾರು ಬಾಹ್ಯಾಕಾಶ ಮತ್ತು ಭೂಮೇಲಿನ ಟೆಲಿಸ್ಕೋಪುಗಳು ಕಣ್ಣು ಕಿಸಿದು ಕಾದಿವೆ.

ಆದರೆ, ಕೇಂಬ್ರಿಜ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಥಿಯರಿಟಿಕಲ್ ಕಾಸ್ಮೊಲಜಿ ವಿಭಾಗದ ನಿರ್ದೇಶಕರಾದ ಜಗತ್ಪ್ರಸಿದ್ಧ ತಾತ್ವಿಕ ಭೌತವಿಜ್ಞಾನಿ ಪ್ರೊ.ಸ್ಟೀಫನ್ ಹಾಕಿಂಗ್ ಈ ಕುರಿತು ಮಾನವರಿಗೆ ಒಂದು ಎಚ್ಚರಿಕೆಯ ಮಾತನ್ನು ಆಡಿದ್ದಾರೆ. 16 ಜ್ಯೋತಿರ್ವರ್ಷ ದೂರವಿರುವ ಗ್ಲೀಸಿ 832 ಸಿ ಎಂಬ ವಾಸಯೋಗ್ಯ ಜಗತ್ತನ್ನು ಉಲ್ಲೇಖಿಸುತ್ತಾ, ಏಲಿಯನ್‌ಗಳ ಜೊತೆಯಲ್ಲಿ ಮಾನವರ ಸಂಪರ್ಕ ಭೂಮಿಯ ಮೇಲೆ ಬದುಕುತ್ತಿರುವ ಮಾನವ ಜನಾಂಗದ ವಿನಾಶಕ್ಕೆ ಕಾರಣವಾಗಬಹುದು ಎಂದು ಎಚ್ಚರಿಸುತ್ತಾರೆ. "ಆದರೆ ಇಂಥ ಸಂಕೇತಗಳನ್ನು ಸ್ವೀಕರಿಸಿದಾಗ ಅವುಗಳಿಗೆ ಉತ್ತರಿಸುವ ಮುನ್ನ ಜಾಗರೂಕತೆ ವಹಿಸುವುದು ಒಳ್ಳೆಯದು. ಅವರು ಎಷ್ಟೊಂದು ಶಕ್ತಿಶಾಲಿಗಳಾಗಿರುತ್ತಾರೆ ಎಂದರೆ ಅವರು ನಾವು ಬ್ಯಾಕ್ಟೀರಿಯಾಗಳನ್ನು ಕಾಣುವುದಕ್ಕಿಂತ ಹೆಚ್ಚಿನ ಬೆಲೆಯನ್ನು ಅವರು ನಮಗೆ ಕೊಡುವುದಿಲ್ಲ."

ಸೆಪ್ಟೆಂಬರ್ 2016ರಲ್ಲಿ ಕ್ಯೂರಿಯಾಸಿಟಿ ಸ್ಟ್ರೀಮ್ ಎಂಬ ವೆಬ್‌ತಾಣದಲ್ಲಿ ಪ್ರಸಾರವಾದ 'ಸ್ಟೀಫನ್ ಹಾಕಿಂಗ್ಸ್ ಫೇವರಿಟ್ ಪ್ಲೇಸಸ್' ಎಂಬ ಸಾಕ್ಷ್ಯಚಿತ್ರದಲ್ಲಿ ಅವರು ಈ ಮಾತನ್ನು ಆಡಿದ್ದಾರೆ. 'ನಮ್ಮವರೆಗೆ ತಲುಪಬಹುದಾದ ಏಲಿಯನ್‌ಗಳು ತಂತ್ರಜ್ಞಾನದ ದೃಷ್ಟಿಯಿಂದ ಬಹಳ ಮುಂದುವರಿದವರಾಗಿರುತ್ತಾರೆ. ನಾವು ನಮ್ಮನ್ನೇ ನೋಡಿಕೊಂಡರೆ ಸಾಕು, ನಮಗಿಂತ ಬುದ್ಧಿವಂತರಿರಬಹುದಾದ ಜೀವಿಗಳು ಯಾವ ರೀತಿ ಬೆಳೆದಿರಬಹುದು ಎಂಬ ಅಂದಾಜು ಸಿಗುತ್ತದೆ. ಆ ಲೆಕ್ಕದಲ್ಲಿ ಬಹುಶಃ ಅವರ ಆಗಮನ ನಮ್ಮ ಹಿತದಲ್ಲಿಲ್ಲ. ನನ್ನ ಊಹೆಯ ಪ್ರಕಾರ ಅವರು ತಮ್ಮ ಸ್ವಗ್ರಹದಲ್ಲಿನ ಎಲ್ಲಾ ಸಂಪನ್ಮೂಲಗಳನ್ನು ಬಳಸಿ, ಮುಗಿಸಿ ಬೃಹತ್ ನೌಕೆಗಳಲ್ಲಿ ಓಡಾಡುತ್ತಿರಬಹುದು. ಇಂಥ ಮುಂದುವರಿದ ಏಲಿಯನ್‌ಗಳು ಬಹುಶಃ ಅಲೆಮಾರಿಗಳಾಗಿರುತ್ತಾರೆ, ಯಾವುದೇ ಗ್ರಹ ಕಣ್ಣಿಗೆ ಬಿದ್ದರೂ ಅದನ್ನು ವಶಪಡಿಸಿಕೊಂಡು ತಮ್ಮ ವಸಾಹತುವನ್ನಾಗಿ ಮಾಡಿಕೊಳ್ಳುವ ಹವಣಿಕೆಯಲ್ಲಿರುತ್ತಾರೆ'. ಮುಂದುವರಿದು ಪ್ರೊ.ಹಾಕಿಂಗ್, 'ಮುಂದೆ ಯಾವಾಗಲಾದರೂ ಏಲಿಯನ್ಸ್ ನಮ್ಮಲ್ಲಿಗೆ ಭೇಟಿ ನೀಡಿದರೆ, ಕ್ರಿಸ್ಟೋಫರ್ ಕೊಲಂಬಸ್ ಮೊಟ್ಟಮೊದಲ ಬಾರಿಗೆ ಅಮೆರಿಕದಲ್ಲಿ ಕಾಲಿರಿಸಿದಾಗಿನ ಪರಿಸ್ಥಿತಿ ಏರ್ಪಡುತ್ತದೆ; ಅಮೆರಿಕನ್ ಇಂಡಿಯನ್ಸ್‌ಗೆ ಅದು ಹಿತಕರವಾಗಿರಲಿಲ್ಲ'.

1498ರಲ್ಲಿ ಇಟಾಲಿಯನ್ ಪರಿಶೋಧಕ ನಾವಿಕ ಕ್ರಿಸ್ಟೋಫರ್ ಕೊಲಂಬಸ್ ಚಿನ್ನ ಮತ್ತು ಅಂಥ ಬೆಲೆಬಾಳುವ ವಸ್ತುಗಳನ್ನು ಅರಸಿಕೊಂಡು ತನ್ನ ನಾವೆಯಲ್ಲಿ ವಿವಿಧ ದೇಶಗಳಿಗೆ ಭೇಟಿ ನೀಡುತ್ತಾರೆ. ಹೋದಲ್ಲೆಲ್ಲಾ ಅಲ್ಲಿನ ಸ್ಥಳೀಯ ಆದಿವಾಸಿಗಳನ್ನು ಬೆದರಿಸಿ, ಬಂಧಿಸಿ, ಚಿತ್ರ ಹಿಂಸೆ ನೀಡಿ, ಹತ್ಯೆ ಮಾಡಿ ನಿರ್ನಾಮ ಮಾಡಿದ್ದ. ಚಿನ್ನವನ್ನಷ್ಟೇ ಅಲ್ಲ ಮನುಷ್ಯರನ್ನೂ ಸಂಪತ್ತು ಎಂದು ಭಾವಿಸಿ ಕಟ್ಟುಮಸ್ತಾದ ಪುರುಷರು ಮತ್ತು ಸ್ತ್ರೀಯರನ್ನು ಆಯ್ಕೆ ಮಾಡಿ ಹಡಗಿಗೆ ಹತ್ತಿಸಿ ಯುರೋಪಿಗೆ ರವಾನೆ ಮಾಡಿದ್ದ. ವಿಶಾಲವಾದ ಗುಲಾಮಗಿರಿಗೆ ನಾಂದಿ ಹಾಡಿದ್ದ. ಪ್ರೊ.ಹಾಕಿಂಗ್ ಏಲಿಯನ್‌ಗಳ ಆಗಮನದ ಆತಂಕವನ್ನು ವಿವರಿಸಲು ಈ ಉಪಮೆಯನ್ನು ಬಳಸಿಕೊಳ್ಳುತ್ತಾರೆ. ಆದರೂ, ಉಳಿದ ಕೆಲವು ಪ್ರಮುಖ ವಿಶ್ವವಿಜ್ಞಾನಿಗಳು ಹಾಕಿಂಗ್ ಅವರ ಆತಂಕವು ಅನಗತ್ಯವಾದದ್ದು ಎನ್ನುತ್ತಾರೆ.